PAPERS LAID ON THE TABLE

SRI M. VEERAPPA MOILY (Minister for Finance and Tourism) (On behalf of Minister for Education).—Sir, I beg to lay :

"Anuual Reports of the Bangalore University for the years 1978–79 and 1979–80."

as required under Section 15 of the Karnataka State Universities Act, 1976.

SRI M. VEERAPPA MOILY (On behalf of Minister for Rural Development and Panchayat Raj).—Sir, I beg to lay :

"Notification No. RDC 8 RPA 80 dated 20th June 1981."

"The Karnataka Taluk Boards Restriction on expenditure) (Amendment) Rules, 1981."

as required under Section 246 of the Karnataka Village Panchayats and Local Boards Act, 1959.

SRI M. M. J. SADYOJATHA (Minister for Transport and Minor Irrigation).—Sir, I beg to lay ;

"Notification No. HD 40 TMR 80 dated 19th May 1981."

The Karnataka Motor Vehicles (Fourth Amendment)Rules, 1981."

as required under Section 133 (3) of the Motor Vehicles Act, 1939.

CALLING ATTENTION TO A MATTER OF URGENT PUBLIC IMPORTANCE

re :—Hardship caused to silk reelers of the State due to non-marketing of silk waste.

SRI G. RAJU GOWDA.—Sir, I call the attention of the Hon'ble Minister for Finance and Tourism to the hardship caused to silk reelers of the State due to non-marketing of silk-waste.

SRI M. VEERAPPA MOILY (Minister for Finance and Tourism).—Sir, I may be permitted to make the followtng statement.

Silk-waste is the main by-product of the silk reeling industry. It is largely the unreelable portion of the cocoon. Silk-waste can be classified into two broad categories that is mulberry and non-mulberry silk-waste. Karnataka produces only mulberry silk waste and the State accounts for about 70 per cent of the production of our country With the steady increase in production of silk, the production of silk

waste has also been on the increase. The estimated production of silk-waste during 1980-81 was 943 tonnes.

The market for silk-waste is for the Spun Silk Mills, Silk-waste processing units and hand spinning units. There are 3 public sector spun silk mills in the country, one in Channapatna in our State, one in Bhagalpur in Bihar and a third unit in Assam. There are two silk waste processing units in the private sector which have recently come up in the State. The total requirement of the public sector Spun Silk Mills, private sector processing units and the hand spinning units which are mostly in the north-eastern region is about 850 tonnes. It may therefore be seen that whereas the production is about 943 tonnes, the demand is 850 tonnes. There is a marginal excess of about 100 tonnes of silk-waste.

Till recently there was a very good export market for mulberry silk waste. Due to closing of Spun Silk Units in Japan and Italy and increased availability of better silk-waste from China and Brazil and other countries the demand for Karnataka silk-waste has declined during the last 3 years.

The export figures for the last 3 years of mulberry silk waste of South Indian origin are given below :

Year		(*in tonnes*)
1978-79	...	1000
1979-80	...	355
1980-81	...	68
1981-82	...	Nil

When there was good demand for silk waste for export as well as for Spun Silk Mills in the country and hand processing units, the producers of silk-waste were getting a very good price. In fact there was a compulsion on the silk-waste exporters to supply prescribed quantities of waste to the Spun Silk Mills. With the drastic decline in exports, the price of silk waste which was around Rs. 20/- per kg. has declined. There is therefore accumulation of silk waste with the Charka Reelers.

The export market for silk waste is not likely to improve in the coming years. The only way to help the producers of silk waste is to increase the processing facilities. Action has already been taken in this direction. The Government Spun Silk Mills, Channapatna which is consuming 300 tonnes of waste per year is taking up a modernisation and expansion plan which will take the consumption to about 600 tonnes. This project is being assisted by the World

Bank and is expected to be completed by 1983-84. The requirements of the private sector unit at Mysore which has just commenced trial production will go up shortly to 1,200 tonnes. This unit will consume mostly inferior variety of silk waste. These two projects will provide considerable relief to the producers of silk-waste. In addition 7 more Spun Silk Units have been licensed by the Govt. of India of which 3 are coming in our State. These units will take care of the increased production of silk-waste which is expected on account of the measures being taken for increasing silk production in the State as well as outside. In fact there is likely to be a situation in the next two or three years of the demand for silk-waste being in excess of the availability of the waste. The State Government is also contemplating legislative measures to ensure that the reelers receive appropriate prices for the waste produced by them and the public and private sector waste processing units in our State receive adequate quantities of silk waste.

The difficulties being faced by the silk reelers on account of the accumulation of stock is temporary and in the near future there will be no difficulty with regard to disposal of silk-waste.

ಶ್ರೀ ಜಿ.ರಾಜಗೌಡ (ಹನೂರು)—ಸ್ವಾಮಿ, ಮಾನ್ಯ ಮಂತ್ರಿಗಳು ತಮ್ಮ ಪೇಳಿಕೆಯಲ್ಲಿ ಏನು ಕೊಟ್ಟಿದ್ದಾರೋ ಇದು ಇವೊತ್ತಿನ ದಿವಸ ಈ ರಾಜ್ಯದಲ್ಲಿರತಕ್ಕ ನೂಲು ಬಿಚ್ಚತಕ್ಕವರಿಗೆ ಆದಷ್ಟು ಬೇಗನೆ ರಿಲೀಫ್ ಕೊಡತಕ್ಕಂಥ ವಿಷಯ ಅಲ್ಲ. ಅವರು ೧೯೮೩-೮೪ನೇ ವರ್ಷದಲ್ಲಿ ೯೪೦ ಟನ್ ಏನು ಉತ್ಪಾದನೆಯಾಗುತ್ತದೋ ಆ ಸಿಲ್ಕ್ ವೇಸ್ಟ್ ನಾವು ತೆಗೆದುಕೊಳ್ಳುತ್ತೇವೆಂದು ತೋರಿಸಿದ್ದಾರೆ. ಇವೊತ್ತಿನ ದಿವಸ ನಮ್ಮ ರಾಜ್ಯದಲ್ಲಿ ಸುಮಾರು ಆರು ಸಾವಿರ ರೇಷ್ಮೆ ನೂಲು ಬಿಚ್ಚತಕ್ಕವರ ಹತ್ತಿರ ಒಂದು ಕೋಟಿ ಕೆ ಜಿ.ಗಿಂತಲೂ ಜಾಸ್ತಿ ಆ ಮಾಲು ಇದೆ. ಅದನ್ನು ಪೆಚ್ಚಿಗೆ ದಿವಸ ಇಟ್ಟುಕೊಂಡರೆ ಬಹಳ ತೊಂದರೆ ಇದೆ. ಸುಮಾರು ೩೫-೪೦ ಕೋಟಿ ರೂಪಾಯಿಯಷ್ಟು ದಾಸ್ತಾನು ಇವೊತ್ತಿನ ದಿವಸ ನಮ್ಮ ೬ ಸಾವಿರ ಜನ ಸಿಲ್ಕ್ ನೂಲು ಬಿಚ್ಚತಕ್ಕವರ ಹತ್ತಿರ ಇದೆ. ಅದನ್ನು ಪೆಚ್ಚು ದಿವಸ ಇಟ್ಟುಕೊಂಡರೆ ಬಣ್ಣ ಕುಂದು ಹೋಗುವ ವಿಷಯ ಅಲ್ಲದೆ ಅದರ ಎಳೆ ಏನಿದೆ ಅದು ತನ್ನ ಬಲವನ್ನು ಕೂಡ ಕಳೆದುಕೊಳ್ಳುತ್ತದೆ. ಅದರ ಬಗ್ಗೆ ನಾವು ಯೋಚನೆ ಮಾಡಬೇಕು. ಉದ್ಯೋಗವನ್ನು ಕಲಿತವರಿಗೆ ಸರ್ಕಾರ ಪರಿಹಾರ ಕೊಡುತ್ತಿರುವಾಗ. ಸ್ವಯಂಪ್ರೇರಿತರಾಗಿ ತಾವೇ ಗ್ರಾಮಾಂತರ ಪ್ರದೇಶಗಳಲ್ಲಿ ಮುಂದೆ ಬಂದು ಉದ್ಯೋಗ ಸೃಷ್ಟಿ ಮಾಡಿ ತಾನು ಬದುಕಿ ಇನ್ನೂ ಹತ್ತಾರು ಜನರಿಗೆ ಉದ್ಯೋಗ ಒದಗಿಸತಕ್ಕ ದೊಡ್ಡ ಕೈಗಾರಿಕೆಗೆ ಒಂದು ದೊಡ್ಡ ಮಾರಕವಾಗಿರತಕ್ಕಂಥ ಏಟು ಬಿದ್ದಾಗ, ನನ್ನ ಅಭಿಪ್ರಾಯ ಏನು ಎಂದರೆ. ಈ ಒಂದು ಕೈಗಾರಿಕೆಯಿಂದ ಸುಮಾರು ೨೦-೩೦ ಸಾವಿರ ಜನ ಜೀವನ ನಡೆಸುತ್ತಿದ್ದಾರೆ ಅವರ ಜೀವನದ ಮೇಲೆ ತಾವು ಚೆಲ್ಲಾಟ ಆಡುತ್ತಿದ್ದೀರಿ ಎಂದು ನನಗೆ ಅರ್ಥವಾಗುತ್ತದೆ. ಸ್ವಾಮಿ, ನಾನು ದಯವಾಡಿ ತಮಗೆ ಹೇಳುತೇನೆ. ತಾವು ಎಕ್ಸ್‌ಪೋರ್ಟ್ ಸಿಸ್ಟಂ ಇಲ್ಲ ಅಂತ ಅನ್ನತಕ್ಕದ್ದಲ್ಲ ಹೇಳಿದಿರಿ, ಯಾರು ಒಬ್ಬ ದೊಡ್ಡ ಖಾಸಗಿ ವರ್ತಕ ತನ್ನಲ್ಲಿರತಕ್ಕಂಥ ಸಿಲ್ಕ್ ವೇಸ್ಟನ್ನು ಚನ್ನಪಟ್ಟಣ ಸಿಲ್ಕ್ ಮಿಲ್‌ಗೆ ಕೊಟ್ಟಾಗ ಅವನು ಎಷ್ಟು ಅಲ್ಲಿ ಸಪ್ಲೈ ಮಾಡುತ್ತಾನೆ ಆದಕ್ಕೆ ರಡರಷ್ಟು ಹೊರಗಡೆ ಎಕ್ಸ್‌ಪೋರ್ಟ್ ಮಾಡತಕ್ಕ ಒಂದು ಸ್ಥಿತಿ ನಮ್ಮ ರಾಜ್ಯದಲ್ಲಿದೆ. ಆ ಒಂದು ಲಿಂಕ್ ಸಿಸ್ಟಮ್ ತಾವು ಮಾಡಿರುವುದರಿಂದ ತೊಂದರೆಯಾಗಿದೆ. ಇದರಲ್ಲೂ ಕೂಡ ಖಾಸಗಿ ವರ್ತಕರು ಏನು ಈ ಸಿಲ್ಕ್ ಗೂಡನ್ನು ಉತ್ಪಾದನೆ ಮಾಡುತ್ತಾರೆ ಅದನ್ನು ತೆಗೆದುಕೊಂಡು ಹೊರಗಡೆ ದೇಶಕ್ಕೆ ಕಳುಹಿಸುತ್ತಿದ್ದರು. ಇವೊತ್ತಿನ ದಿವಸ ಆ ರೀತಿ ಮಾಡಿದಾಗ ನಮ್ಮ ದೇಶದಲ್ಲಿರತಕ್ಕ ದಾಸ್ತಾನು ಕರಗುತ್ತದೆ. ಈಗ ತಾವು ಕೊಟ್ಟಿರತಕ್ಕ ರಿಲೀಫ್ ಏನಿದೆ ಇದು ಲಾಂಗ್ ಲೈಫ್ ರಿಲೀಫ್ ಆಗುತ್ತದೆ. ಈಗ ತಾವು ನಮ್ಮಲ್ಲಿರತಕ್ಕ ದಾಸ್ತಾನು ಏನಿದೆ ಅದನ್ನು ಪೂರಾ ವಿಲೇ ಮಾಡಲಿಕ್ಕೆ ಏರ್ಪಾಡು ಮಾಡಬೇಕು. ತಮಗೆ ನಾನು ಒಂದು

ಸಲಹೆ ಕೊಡಬೇಕೆಂದರೆ, ರೇಷ್ಮೆಗೂಡು ಬೆಳೆಯುತಕ್ಕವರು ಮಾರ್ಕೆಟ್‌ಗೆ ತರಬೇಕು. ರೇಷ್ಮೆ ನೂಲು ಬಿಚ್ಚುತಕ್ಕವರು ರೇಷ್ಮೆ ವಿನಿಮಯ ಕೇಂದ್ರಕ್ಕೆ ತರಬೇಕು. ಇದು ಬೈ ಪ್ರಾಡಕ್ಟ್ ಆಫ್ ದಟ್ ಕಲ್ಚರ್. ಆಂದ ಮೇಲೆ ಈ ಸಿಲ್ಕ್‌ವೇಸ್ಟನ್ನು ನೀವೆ ಏತಕ್ಕೆ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾರದು. ತಾವೇ ಒಂದು ಕಾರ್ಪೊರೇಷನ್ ಮಾಡಿ, ಈ ರಾಜ್ಯದಲ್ಲಿ ಏನು ಉತ್ಪಾದನೆ ಆಗುತ್ತದೆ ಅದನ್ನು ತಾವೇ ಕೊಂಡು ಕೊಳ್ಳಲಿಕ್ಕೆ ವ್ಯವಸ್ಥೆ ಮಾಡಿ. ಚನ್ನಪಟ್ಟಣ ಮಿಲ್ಸ್, ಗವರ್ನಮೆಂಟ್ ಸಿಲ್ಕ್ ವೇಸ್ಟ್ ಮಿಲ್ಸ್ ಅಥವಾ ಬೇರೆ ಮಿಲ್ಸ್‌ಗಳಿಗೆ ತಾವು ಕೊಡತಕ್ಕಂಥದ್ದು ಆದರೆ ಇದು ಕೂಡ ನಿಧಾನವಾಗುತ್ತದೆ. ಈಗ ಸುಮಾರು ಒಂದು ಕೋಟಿ ಕೆ.ಜಿ. ಏನು ದಾಸ್ತಾನು ಇದೆ. ಇದು ವಿಲೇವಾರಿ ಮಾಡುವ ವ್ಯವಸ್ಥೆ ಮಾಡಿದರೆ ಒಂದು ರಿಲೀಫ್ ಸಿಕ್ಕುತ್ತದೆ. ದಯಮಾಡಿ ಈ ಖಾಸಗಿ ಕ್ಷೇತ್ರದಲ್ಲಿರತಕ್ಕ ಜನ, ಈ ರೇಷ್ಮೆ ನೂಲು ಬಿಚ್ಚುತಕ್ಕವರು ಇದ್ದಾರೋ ಅವರೆಲ್ಲರಿಗೂ ಕೂಡ ತಮ್ಮ ಬಿಸಿನೆಸ್ ನಿಲ್ಲಿಸುವ ಪರಿಸ್ಥಿತಿ ಬಂದಿದೆ. ಗ್ರಾಮಾಂತರ ಪ್ರದೇಶ ಗಳಲ್ಲಿ ನಿರ್ಗತಿಕರಾಗಿರತಕ್ಕವರು ಈ ಕೈಗಾರಿಕೆಯಿಂದ ಜೀವನ ಮಾಡತಕ್ಕವರು ಏನಿದ್ದರು ಅವರ ಬಗ್ಗೆ ಯೋಚನೆ ಮಾಡಬೇಕಾಗಿದೆ. ಇದನ್ನು ಅಷ್ಟು ಲಘುವಾಗಿ ತೆಗೆದುಕೊಳ್ಳುವುದು ಬೇಡ. ಇವೊತ್ತು ಚನ್ನಪಟ್ಟಣ ಸ್ಪನ್ ಮಿಲ್ಸ್‌ಗೆ, ಯಾರೋ ಒಬ್ಬರು ತನ್ನಲ್ಲಿರತಕ್ಕಂಥ ಜೂಟ್ ಸಪ್ಲೈ ಮಾಡುತ್ತಾನೆ ಆದಕ್ಕೆ ಎರಡರಷ್ಟು ಹೊರಗೆ ಎಕ್ಸ್‌ಪೋರ್ಟ್ ಮಾಡತಕ್ಕ ಒಂದು ಲಿಂಕ್ ಪದ್ಧತಿ ಏನು ಮಾಡಿದ್ದೀರಿ ದಯಮಾಡಿ ಅದನ್ನು ತೆಗೆದುಹಾಕಿ. ಖಾಸಗಿ ವರ್ತಕರು ಯಾವಾಗ ಮುಂದೆ ಬರುತ್ತಾರೆ, ಅವರು ಎಕ್ಸ್‌ಪೋರ್ಟ್ ಮಾಡಲಿಕ್ಕೆ ಅನುಕೂಲವಾಗುತ್ತದೆ. ಮೊದಲು ೩೦-೪೦ ರೂಪಾಯಿಗೆ ಹೋಗುತ್ತಿದ್ದ ಮಾಲನ್ನು ಇವೊತ್ತು ೫ ರೂಪಾಯಿಗೆ ಕೇಳುತ್ತಿಲ್ಲ. ಇವೊತ್ತು ಪ್ರತಿಯೊಬ್ಬರು ಸ್ಟಾಕ್ ಇಟ್ಟುಕೊಂಡಿದ್ದಾರೆ, ಅವರಿಗೆ ತುಂಬಾ ತೊಂದರೆಯಾಗುತ್ತಿದೆ. ಸರ್ಕಾರ ಈ ಬಗ್ಗೆ ತಕ್ಷಣ ಪರಿಹಾರ ಮಾಡತಕ್ಕಂಥ ವ್ಯವಸ್ಥೆಯನ್ನು ಸರ್ಕಾರ ಕೈಗೊಳ್ಳಬೇಕು. ಸುಮಾರು ೬ ಸಾವಿರ ಜನ ರೀಲರ್ಸ್ ಏನಿದ್ದಾರೆ, ಮತ್ತು ಇದರಲ್ಲಿ ಕೆಲಸ ಮಾಡತಕ್ಕಂಥ ಲಕ್ಷಾಂತರ ಜನರು ಏನಿದ್ದಾರೆ ಅವರಿಗೆ ತೃಪ್ತಿಕರವಾದಂಥ ರೀತಿಯಲ್ಲಿ ಸರ್ಕಾರ ಕೆಲಸ ಮಾಡುತ್ತದೆ ಎಂದು ನಂಬಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಡಿ. ಟಿ. ರಾಮು (ಚನ್ನಪಟ್ಟಣ)—ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜುಗೌಡರು ತಂದಿರತಕ್ಕ ಗಮನ ಸೆಳೆಯುವ ಸೂಚನೆ ಬಹಳ ಮಹತ್ವವಾದುದು. ಏಕೆಂದರೆ, ಸುಮಾರು ೬ ಸಾವಿರ ಬಡ ಜನರು ಸಣ್ಣ ಸಣ್ಣ ಚರಕಗಳನ್ನು ಏನು ಇಟ್ಟುಕೊಂಡಿದ್ದಾರೆ, ಮಧ್ಯಮ ವರ್ಗದ ಜನ ರೀಲರ್ಸ್‌ನಿಂದ ಸಿಲ್ಕ್ ವೇಸ್ಟ್ ಏನು ತಯಾರಿಸುತ್ತಿದ್ದಾರೆ, ಇವರು ಬಹಳಷ್ಟು ಆರ್ಥಿಕವಾದ ಮುಗ್ಗಟ್ಟಿಗೆ ಸಿಕ್ಕುತ್ತಾರೆ. ಇವೊತ್ತಿನ ದಿವಸ ಬಡವರನ್ನು ಕಾಪಾಡಬೇಕಾದರೆ, ಸಿಲ್ಕ್ ವೇಸ್ಟನ್ನು ಸರ್ಕಾರ ಕೊಂಡುಕೊಳ್ಳುವುದಕ್ಕೆ ವ್ಯವಸ್ಥೆ ಮಾಡಬೇಕು. ಇಲ್ಲದೇ ಹೋದರೆ, ಜನತೆ ತಮ್ಮ ಕಸಬನ್ನು ಬಿಟ್ಟು ಬಿಟ್ಟು, ಬೇರೆ ಕಸುಬಿನ ಕಡೆ ಹೋಗುವಂಥ ಪರಿಸ್ಥಿತಿ ನಿರ್ಮಾಣವಾಗಬಹುದು ಎಂದು ನನ್ನ ಭಾವನೆ. ಆದುದರಿಂದ, ಸರ್ಕಾರ ಇವರ ಬಗ್ಗೆ ಹೆಚ್ಚಿನ ಕಳಕಳಿಯನ್ನು ವಹಿಸಬೇಕು. ಬಡವರ ಬಗ್ಗೆ ಕನಿಕರ, ಸಹಾನುಭೂತಿಯನ್ನು ತೋರಿಸಬೇಕು. ಬೇಕಾದಷ್ಟು ಜನರು ನಮ್ಮಲ್ಲಿ ೫೦೦ ಕೆ.ಜಿ. ೬೦೦ ಕೆ.ಜಿ. ಉಳಿದಿದೆ ಎಂದು ನನಗೆ ದೂರು ಕೊಡುತ್ತಿದ್ದಾರೆ. ಈ ವೇಸ್ಟನ್ನು ಉಪಯೋಗಿಸತಕ್ಕ ಕಾರ್ಖಾನೆ ನನ್ನ ಕ್ಷೇತ್ರದಲ್ಲಿ ಇರುವುದರಿಂದ, ಇವರ ಕಷ್ಟವನ್ನು ನಾನು ನೇರವಾಗಿ ತಿಳಿದುಕೊಳ್ಳಬೇಕಾಗಿದೆ. ಇವೊತ್ತು ಬಡವರನ್ನು ಉದ್ಧಾರ ಮಾಡಬೇಕಾಗಿರುವುದರಿಂದ. ಈ ಸಿಲ್ಕ್ ವೇಸ್ಟ್ ಸರ್ಕಾರವೇ ಕೊಂಡುಕೊಂಡು ಅದನ್ನು ದಾಸ್ತಾನು ಮಾಡಿ ಇಟ್ಟುಕೊಂಡು ಅದನ್ನು ಬೇರೆ ದೇಶಕ್ಕೆ ಕಳುಹಿಸಿ, ಇಲ್ಲ, ೧೯೮೨-೮೩ ರಲ್ಲಿ ಪ್ರಾರಂಭವಾಗ ತಕ್ಕಂಥ ಕಾರ್ಖಾನೆಗಳಿಗೆ ಅದನ್ನು ಕೊಡತಕ್ಕ ವ್ಯವಸ್ಥೆ ಮಾಡಲಿ ಎಂದು ಹೇಳಿ ಬಡವರ ಬಗ್ಗೆ ಮಾನವೀಯ ದೃಷ್ಟಿಯನ್ನು ಉಪಯೋಗಿಸಿ ಸರ್ಕಾರ ಉದಾರ ನೀತಿಯನ್ನು ಅನುಸರಿಸಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

SRI ABDUL LATHEEF,—Sir, though I am not a signatory to this Call Attention Notice with your permission would I like to speak a few wr ds about the problems of the Silk Industry in our State.

The Central Silk Board constituted a committee last year to go into the problems facing the Silk Industry and this Committee toured the entire country and has given a report. One of the recommendations of its report was to delink this silk waste with the

spinning factories. Inspite of its strong recommendation, the Central Government had not taken any decision so far and no concrete steps have been taken to resolve this problem. Owing to their inordinate delay the people involved in this industry are facing lot of difficulty and the reelers are finding it difficult to store the silkwaste, because it is a very important byproduct and it gives some extra money to the reelers. Therefore, I suggest to the Hon'ble Minister incharge of this Industry to set up a small Committee of the Legislators to study the problems of the Silk Industry and suggest suitable measures for giving relief to the people who are all involved in this. Thank you, Sir.

ಶ್ರೀ ಎಂ. ಪಿ. ಬಸಪ್ಪ (ಚಾಮರಾಜನಗರ) – ಸನ್ಮಾನ್ಯ ಅಧ್ಯಕ್ಷರೆ, ನನ್ನ ಸ್ನೇಹಿತರು ಇದರ ಬಗ್ಗೆ ಈಗಾಗಲೇ ಪ್ರಸ್ತಾಪ ಮಾಡಿದ್ದಾರೆ. ರೇಷ್ಮೆ ಉದ್ಯಮವನ್ನು ಆಯಂಬಿಸಿರತಕ್ಕ ಜನ ಕಷ್ಟದಲ್ಲಿ ಸಿಕ್ಕಿರತಕ್ಕಂತಾದ್ದು ನಿಜ. ಈ ವಿಚಾರವನ್ನು ಪ್ರಸ್ತಾಪ ಮಾಡಬೇಕೆಂದು ಕೇಂದ್ರ ರೇಷ್ಮೆ ಮಂಡಲಿಗೆ ಕಳೆದ ವರ್ಷ ನಾವು ಆ ಜವಾಬ್ದಾರಿ ಕೊಟ್ಟಿದ್ದೆವು. ಅವರು ದೇಶಾದ್ಯಂತ ಪ್ರವಾಸ ಮಾಡಿದ್ದಾರೆ. ಅಂಕಿಅಂಶ ಗಳನ್ನು ಕಲೆಕ್ಟ್ ಮಾಡಿ ರಿಪೋರ್ಟ್ ಕೊಟ್ಟಿರು. ಆದರೆ ನಮಗೆ ಗೊತ್ತಾಗದಂಥ ವಿಚಾರ ಬಹುಶಃ ನಾವು ಎಷ್ಟು ವೇಸ್ಟ್ ತಯಾರು ಮಾಡುತ್ತಿದ್ದೇವೆ, ನಮ್ಮ ದೇಶದಲ್ಲಿ ಅಷ್ಟನ್ನು ಕನ್ಸ್ಯೂಮ್ ಮಾಡಕ್ಕೆ ಫ್ಯಾಕ್ಟರಿಗಳಿಲ್ಲ ಅಂತ ಅಂದುಕೊಂಡಿದ್ದೇನೆ. ಬಹುಶಃ ತಯಾರಾದಂಥ ಕಚ್ಚಾ ರೇಷ್ಮೆ ವಿದೇಶಗಳಿಗೆ ಜಪಾನ್‌ಗೆ ಹೋಗುತ್ತಿತ್ತು. ಇದು ಪಾಸ್ತವಾಂಶ. ಈಗ ಏನಾಗಿದೆ, ಅಲ್ಲಿ ಕಚ್ಚಾ ರೇಷ್ಮೆ ವೇಸ್ಟ್ ಸ್ಪನ್ ಸಿಲ್ಕ್ ಫ್ಯಾಕ್ಟರಿ ಡಿಸ್‌ಮಾಂಟಲ್ ಮಾಡಿದ್ದಾರೆ ಅವರು ಏನು ತರಿಸಿಕೊಳ್ಳುತ್ತಿದ್ದಾರೆ ಅದು ನಿಂತಿದೆ ಎಂದು ನನಗೆ ತಿಳಿದುಬಂದಿದೆ ಇದರಿಂದ ಏನಾಗಿದೆ, ಹೊರಗಡೆ ಹೋಗತಕ್ಕ ರೇಷ್ಮೆ ಕೂಡ ಕಡಿಮೆ ಯಾಗಿದೆ. ಈಗ ಲಂಕಿಂಗ್ ಮತ್ತು ಡೀಲಿಂಕಿಂಗ್ ಬೇಳುತ್ತಿದ್ದಾರೆ ಅದಕ್ಕೂ ಇದಕ್ಕೂ ಸಂಬಂಧವಿಲ್ಲ. ಡೀಲಿಂಕಿಂಗ್ ಮಾಡಿದ ಮಾತ್ರಕ್ಕೆ ಕಚ್ಚಾ ರೇಷ್ಮೆ ಹೋಗುತ್ತದೆಂದು ತಿಳಿದುಕೊಂಡಿದರೆ ಅದು ಭ್ರಾಂತಿ. ಇವೊತ್ತು ನಮ್ಮ ದೇಶದಲ್ಲಿ ಸ್ಪನ್ ಸಿಲ್ಕ್ ಫ್ಯಾಕ್ಟರಿ ಮೂರು ಇವೆ. ಒಂದು ಚೆನ್ನಪಟ್ಟಣದಲ್ಲಿದೆ ಎರಡನೆಯದು ಅಸ್ಸಾಂನಲ್ಲಿದೆ. ಇನ್ನು ಮೂರನೆಯದು ಈಗತಾನೆ ನಂಜನಗೂಡಿನಲ್ಲಿ ಪ್ರಾರಂಭ ಮಾಡಿದ್ದಾರೆ. There are 10 applications pending before the Central Government as well as Central Silk Board for clearance to establish small units of atleast 1500 spindles to consume this silk waste that is produced in the country. ಆದ್ದರಿಂದ, ಇವೊತ್ತು ಸಿಲ್ಕ್ ವೇಸ್ಟ್ ಜಾಸ್ತಿ ತಯಾರಾಗುತ್ತಿರುವುದರಿಂದ, ಅದನ್ನು ಕನ್ಸ್ಯೂಮ್ ಮಾಡಲಿಕ್ಕೆ ನಮ್ಮಲ್ಲಿ ಸಾಕಷ್ಟು ಜಾಸ್ತಿ ಸಂಖ್ಯೆಯಲ್ಲಿ ಫ್ಯಾಕ್ಟರಿಗಳು ಇಲ್ಲ. ಈ ರೀತಿ ಆಗಿರತಕ್ಕಂತಾದ್ದು ನಿಜ. ಇದಕ್ಕೆ ಏನಾದರೂ ಸಲಹೆ ಕೊಡಬೇಕು ಎಂದರೆ, ಸರ್ಕಾರದವರು ಈಗ ಏನು ಸಿಲ್ಕ್ ವಾರ್ಕೆಟ್‌ಗೆ ತಾವು ಫ್ಲೋರಿಂಗ್, ಸೀಲಿಂಗ್ ಪ್ರೈಸ್ ಇಟ್ಟು ಸ್ಪೆಶಲ್ ಪ್ರೈಸ್ ಮಾಡಬೇಕೆಂದು ಮಾಡುತ್ತಿದ್ದೀರಿ, ಹಾಗೆ ತಾವು ನೇರವಾಗಿ ನಮ್ಮ ಸರ್ಕಾರ ಮಾಡಿದರೂ ಪರವಾಯಿಲ್ಲ. ಅಥವಾ ಕೇಂದ್ರ ರೇಷ್ಮೆ ಮಂಡಲಿ ಮಾಡಿದರೂ ಪರವಾಯಿಲ್ಲ, ಈ ಕಚ್ಚಾ ರೇಷ್ಮೆಯನ್ನು ಸ್ಪಾಕ್ ಮಾಡಿ ಬೆಲೆ ಬಿದ್ದು ಹೋಗದ ಹಾಗೆ ಒಂದು ಫ್ಲೋರಿಂಗ್ ಪ್ರೈಸ್ ಗ್ಯಾರಂಟಿ ಇಟ್ಟು, ಆದು ಪ್ರಾಡಕ್ಟ್‌ಸ್ ಮಾಡತಕ್ಕವನಿಗೆ ಕೊಡತಕ್ಕದ್ದು ಬಹಳ ಅವಶ್ಯಕ. ಈ ದೃಷ್ಟಿಯಿಂದ ನಾವು ಏನು ಒಂದು ರಾ ಸಿಲ್ಕ್ ಮಾರ್ಕೆಟಿಂಗ್ ಬೋರ್ಡ್ ಮಾಡಿದ್ದೇವೆ. ಅವರಿಗೆ ಈ ಜವಾಬ್ದಾರಿ ಹಿಸಿ, ಅವನ್ನು ತೆಗೆದು ಸ್ಪಾಕ್ ಮಾಡಿ ಯಾವಾಗ ಡಿಮ್ಯಾಂಡ್ ಬರುತ್ತದೆ ಆಗ ಮಾರಾಟ ಮಾಡತಕ್ಕ ವ್ಯವಸ್ಥೆ ಮಾಡಿದರೆ ಅನುಕೂಲವಾಗುತ್ತದೆ. ತಾವು ಕೇಂದ್ರ ಸರ್ಕಾರಕ್ಕೆ ಹೇಳಬೇಕು. ಸ್ಪನ್ ಸಿಲ್ಕ್ ಫ್ಯಾಕ್ಟರಿಗಳನ್ನು ತೆರೆಯುವುದಕ್ಕೆ ಹೆಚ್ಚು ಹೆಚ್ಚು ಲೈಸನ್ಸ್ ಕೊಡುವಂತೆ ತಾವು ಕೇಂದ್ರ ಸರ್ಕಾರಕ್ಕೆ ಹೇಳಬೇಕೆಂದು ಈ ಸಂದರ್ಭದಲ್ಲಿ ವೇಳೆ ಬಯಸುತ್ತೇನೆ.

ಶ್ರೀ ಎಂ. ಸಿದ್ದಯ್ಯಾದಯ್ಯ (ಕೊಳ್ಳೇಗಾಲ) – ಮಾನ್ಯ ಅಧ್ಯಕ್ಷರೆ, ಈಗ ನಮ್ಮ ಸದಸ್ಯರಾದ ರಾಜಗೌಡರು ತಂದಿರತಕ್ಕ ಗಮನಸೆಳೆಯುವ [illegible] ಸಿಲ್ಕ್ ವೇಸ್ಟ್ ಬಗ್ಗೆ [illegible] ಮಾಡಿ ಗಳನ್ನು ನಾನು ಹೇಳಬಯಸುತ್ತೇನೆ.

ನಮ್ಮಲ್ಲಿ ರೀಲರ್ಸ್ ಇದ್ದಾರೆ. ಅವರ ಹತ್ತಿರ ಸ್ವಲ್ಪ ಸ್ವಲ್ಪ ಸಿಲ್ಕ್ ಇದ್ದೇ ಇರುತ್ತದೆ. ಈಗ ೬ ತಿಂಗಳ ಹಿಂದೆ ಒಂದು ಕೆ.ಜಿ.ಗೆ ೧೫-೨೦ ರೂ.ನಂತೆ ಮಧ್ಯವರ್ತಿಗಳು ಸಿಲ್ಕನ್ನು ಪರ್ಚೇಸ್ ಮಾಡಿದರು. ಇವರು ಸರ್ಕಾರದ ಪರವಾನಗಿಯನ್ನು ಪಡೆದಿರತಕ್ಕವರು. ಆದರೆ ಇವತ್ತು ಆದೇ ಸಿಲ್ಕನ್ನು ಒಂದು ಕೆ.ಜಿ.ಗೆ ೬-೮ ರೂಪಾಯಿಗೂ ಕೂಡ ಕೇಳುವವರಿಲ್ಲ. ಈಗ ಚನ್ನಪಟ್ಟಣದಲ್ಲಿ ಒಂದೇ ಒಂದು ಫ್ಯಾಕ್ಟರಿ ಇದ್ದು ಅದಕ್ಕೆ ವೇಸ್ಟ್ ಸಿಲ್ಕ್‌ನ್ನು ಪೂರೈಸುವುದನ್ನು ಸಾಧ್ಯವಾಗಿಲ್ಲ. ಮೊದಲು ಇದನ್ನು ಹೊರಗಡೆ ಕಳುಹಿಸುವುದಕ್ಕೆ ಯಾರಿಗೆ ಪರವಾನಗಿಯನ್ನು ಕೊಡುತ್ತಿದ್ದರೋ ಅದರ ಜೊತೆಗೆ ಇನ್ನೂ ಅನೇಕ ಜನರಿಗೆ ಪರವಾನಗಿಯನ್ನು ಕೊಟ್ಟು ಸರಕನ್ನು ಬೇರೆ ಕಡೆಗೆ ವರ್ಗಾಯಿಸುವುದಕ್ಕೆ ಅವಕಾಶವಿದೆ. ಈಗ ವ್ಯಾಪಾರಿಗಳಿಗೆ ಬಹಳ ನಷ್ಟವಾಗುತ್ತಿದೆ. ಆದ್ದರಿಂದ ಸರ್ಕಾರದವರು ಸರ್ಕಾರದ ಮತಿಯಿಂದ ಇನ್ನೂ ಒಂದೆರಡು ಫ್ಯಾಕ್ಟರಿಗಳನ್ನು ಕೊಳ್ಳೇಗಾಲ, ಕೋಲಾರ, ನಂಜನಗೂಡು ಮುಂತಾದ ಕಡೆಗಳಲ್ಲಿ ಸ್ಥಾಪನೆ ಮಾಡಿದರೆ ಬಹಳ ಅನುಕೂಲವಾಗುತ್ತದೆ. ಈಗಿನ ಪರಿಸ್ಥಿತಿಯನ್ನು ನೋಡಿದರೆ ಯಾವುದೋ ಒಂದು ಅಂದಾಜಿನ ಮೇಲೆ ಸರಕನ್ನು ತೆಗೆದುಕೊಂಡು ಬಂದರೆ ಕೊನೆಗೆ ಕೈಯಿಂದ ದಂಡ್ಡನ್ನು ಕಳೆದುಕೊಳ್ಳಬೇಕಾಗಿದೆ. ಒಂದು ಕೆ.ಜಿ.ಗೆ ೧೫ ರೂ. ನಂತೆ ವೇಸ್ಟ್ ಸಿಲ್ಕ್ ಹೋಗುತ್ತದೆಂದು ತಿಳಿದು ತೆಗೆದುಕೊಂಡು ಬಂದರೆ ಅದು ಕೊನೆಗೆ ೫-೬ ರೂ.ಗೂ ಕೂಡ ಯಾರು ಕೇಳುವುದಿಲ್ಲ. ಆಗ ಇದನ್ನು ತಂದವರಿಗೆ ಸುಮಾರು ೧೦ ರೂ. ನಷ್ಟವಾಗುತ್ತದೆ. ಈ ನಷ್ಟವನ್ನು ತಪ್ಪಿಸಬೇಕಾದರೆ ಸರ್ಕಾರದವರು ಸೂಕ್ತ ವ್ಯವಸ್ಥೆ ಮಾಡಬೇಕು ಆದ್ದರಿಂದ ಈ ವಿಚಾರವನ್ನು ನಾವು ಸರ್ಕಾರದ ಗಮನಕ್ಕೆ ತಂದಿದ್ದೇವೆ.

ಶ್ರೀ ಎಂ. ವೀರಪ್ಪ ಮೊಯ್ಲಿ.— ಮಾನ್ಯ ಸದಸ್ಯರಾದ ರಾಜೂಗೌಡರು ಸುಮಾರು ೧ ಕೋಟಿ ಕೆ.ಜಿ. ಸಿಲ್ಕ್ ದಾಸ್ತಾನು ಇದೆಯೆಂದು ಸದನಕ್ಕೆ ತಿಳಿಸಿದರು. ಆದರೆ ಅವರು ಹೇಳಿದಷ್ಟು ಇರಲಾರದು. ಬಹುಶಃ ಅವರು ಹೇಳಿದ್ದರಲ್ಲಿ ಸ್ವಲ್ಪ ಉತ್ಪ್ರೇಕ್ಷೆ ಇದೆ ಎಂದು ನಾನು ಭಾವಿಸುತ್ತೇನೆ.

ಶ್ರೀ ಜಿ. ರಾಜೂಗೌಡ.—ಸ್ವಾಮಿ, ಒಂದು ವರ್ಷದಿಂದ ಸ್ಟಾಕ್ ಹಾಗೆಯೇ ಉಳಿದಿದೆ.....

ಶ್ರೀ ಎಂ. ವೀರಪ್ಪ ಮೊಯ್ಲಿ.—ಸಾಮಾನ್ಯವಾಗಿ ಅಂತರಾಷ್ಟ್ರೀಯ ಮಟ್ಟದಲ್ಲಿ ಕೂಡ ಮಾರ್ಕೆಟ್ ಸ್ಥಗಿತವಾಗಿದೆ. ಇನ್ನು ಒಂದು ವರ್ಷದಲ್ಲಿ ಈ ಪರಿಸ್ಥಿತಿ ಸುಧಾರಿಸುವ ಭರವಸೆ ಇದೆ. ಮಾನ್ಯ ಸದಸ್ಯರಿಗೆ ತಿಳಿದಿರುವಂತೆ ಇತ್ತೀಚೆಗೆ ಕೊಟ್ಟಂಥ ಲೈಸೆನ್ಸ್‌ಗಳಲ್ಲಿ ೩ ಲೈಸೆನ್ಸ್ ನಮ್ಮ ಕರ್ನಾಟಕ ರಾಜ್ಯಕ್ಕೆ ಸಿಕ್ಕಿದೆ. ಇನ್ನೂ ಕೂಡ ನಮ್ಮಲ್ಲಿ ಕೈಗಾರಿಕೆಗಳು ಬರಬೇಕಾಗುತ್ತದೆ. ನಮ್ಮ ಅಂದಾಜಿನ ಪ್ರಕಾರ ಈ ೩ ಕೈಗಾರಿಕೆಗಳು ಬಂದರೆ ನಮಗೆ ಸಿಕ್ಕತಕ್ಕ ಸಿಲ್ಕ್ ವೇಸ್ಟ್ ಏನಿದೆ ಅದು ಸಾಕಾಗುವುದಿಲ್ಲ ಎನ್ನುವ ಭಾವನೆ ಇದೆ. ಆದರೂ ಕೂಡ ಅನೇಕ ಮಾನ್ಯ ಸದಸ್ಯರುಗಳು ಮಾತನಾಡುತ್ತಾ ಇನ್ನೂ ಹೆಚ್ಚು ಹೆಚ್ಚು ಕೈಗಾರಿಕೆಗಳು ಈ ಕ್ಷೇತ್ರದಲ್ಲಿ ಬೆಳೆಯಬೇಕು, ಇಲ್ಲದೇ ಹೋದರೆ ರೀಲರ್ಸ್‌ಗೆ ಬಹಳ ತೊಂದರೆಯಾಗುತ್ತದೆಂದು ಹೇಳಿದ್ದರು. ಈ ರೀತಿ ಹೆಚ್ಚು ಹೆಚ್ಚು ಕೈಗಾರಿಕೆಗಳು ಬರಬೇಕಾದರೆ ಕೇಂದ್ರ ಸರ್ಕಾರದ ಹತ್ತಿರ ಹೋಗಿ ನಮಗೆ ಇನ್ನೂ ಹೆಚ್ಚು ಲೈಸೆನ್ಸ್ ಕೊಡಬೇಕೆಂದು ಒತ್ತಾಯ ಮಾಡಿ ತೆಗೆದುಕೊಂಡು ಈ ಉದ್ಯಮವನ್ನು ಬೆಳೆಸುವುದಕ್ಕೆ ಪ್ರಯತ್ನ ಮಾಡೋಣ. ತಮಗೆ ಒಂದು ಮಾತು ಹೇಳುವುದಾದರೆ ಇತ್ತೀಚೆಗೆ ಕರೀಂ ಕ್ಯಾಸ್ಕೆಮಿ ಎಂದು ಒಂದು ಫ್ಯಾಕ್ಟರಿ ನಂಜನಗೂಡಿನಲ್ಲಿ ಪ್ರಾರಂಭವಾಗಿದ್ದು ಇದು ಸುಮಾರು ೧೫ ಲಕ್ಷ ಕೆ.ಜಿ. ಕೆಪ್ಯಾಸಿಟಿ ಉಳ್ಳದ್ದಾಗಿದೆ. ಇವರು ಸುಮಾರು ೧೦-೧೫ ಲಕ್ಷ ಕೆ ಜಿ. ಸಿಲ್ಕ್ ವೇಸ್ಟ್‌ನ್ನು ಖರೀದಿ ಮಾಡುತ್ತಾರೆ. ಚನ್ನಪಟ್ಟಣ ಫ್ಯಾಕ್ಟರಿಯವರೂ ಕೂಡ ಒಂದು ಪ್ರೈಸನ್ನು ನಿಗದಿ ಮಾಡಿದ್ದಾರೆ. ಮಾನ್ಯ ಸದಸ್ಯರಾದ ಬಸಪ್ಪನವರು ಹೇಳಿದಂತೆ ಹಿಂದೆ ಕೂಡ ವ್ಯಾಪಾರಸು ಮಾಡಿತ್ತು. ರಾ ಸಿಲ್ಕನ್ನು ಖರೀದಿ ಮಾಡಿ ಸ್ಟಾಕ್ ಇಡುವ ಸಂದರ್ಭದಲ್ಲಿ ಪ್ರೈಸ್ ಫಿಕ್ಸ್ ಮಾಡಿದರೆ ಈಗ ರೀಲರ್ಸ್ ಏನು ಸಮಸ್ಯೆಯನ್ನು ಎದುರಿಸುತ್ತಿದ್ದಾರೆ ಇದನ್ನು ಪರಿವರಿಸುವುದಕ್ಕೆ ಅನುಕೂಲವಾಗುತ್ತದೆ. ಆದಷ್ಟು ಬೇಗ ಸಿಲ್ಕ ಕಾರ್ಪೊರೇಷನ್ ಅಥವಾ ಸಿಲ್ಕ್ ಬೋರ್ಡ್‌ನ ಮೂಲಕ ಖರೀದಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಇನ್ನು ಮಾನ್ಯ ಸದಸ್ಯರಾದ ಅಬ್ದುಲ್ ಲತೀಫ್ ಹೇಳಿದಂತೆ ಸೆಂಟ್ರಲ್ ಸಿಲ್ಕ್ ಬೋರ್ಡ್‌ನವರು ಒಂದು ಸಮಿತಿಯನ್ನು ನೇಮಕ ಮಾಡಿದರು. ಅದರಲ್ಲಿ ಮಾನ್ಯ ಸದಸ್ಯರಾದ ಅಬ್ದುಲ್ ಲತೀಫ್‌ರವರೂ ಅದರಲ್ಲಿ ಸದಸ್ಯರಾಗಿದ್ದರು, ಅವರ ವ್ಯಾಪಾರಸನ್ನು ಸೆಂಟ್ರಲ್ ಸಿಲ್ಕ್ ಬೋರ್ಡಿಗೆ ಕೊಟ್ಟಿದ್ದಾರೆ. ಅದು ಯಾವ ಹಂತದಲ್ಲಿದೆ ಎಂಬುದನ್ನು ಪರಿಶೀಲಿಸಿ ಸಿಲ್ಕ್ ರೀಲರ್ಸ್‌ಗೆ ಬೇಕಾದ ಅನುಕೂಲ ಮಾಡಿಕೊಡುವು

ದಕ್ಕೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಕೇಂದ್ರ ರೇಷ್ಮೆ ಮಂಡಲಿ ಒಂದು ಸಮಿತಿಯನ್ನು ಮಾಡಿ ವರದಿ ಕೊಟ್ಟಿದ್ದರು. ಅದನ್ನೇ ನಾವು ಇನ್ನೂ ಕಾರ್ಯಗತ ಮಾಡಿಲ್ಲ. ಇದರ ಬಗ್ಗೆ ಸಾಕಷ್ಟು ವರದಿಗಳು ಬಂದಿವೆ. ಸರ್ಕಾರದಲ್ಲಿ ಇನ್ನೂ ಅನೇಕ ಶಿಫಾರಸುಗಳನ್ನು ಕಾರ್ಯಗತ ಮಾಡಿಲ್ಲ. ಈಗ ಅವುಗಳನ್ನು ಕಾರ್ಯಗತ ಮಾಡೋಣ. ಇನ್ನೊಂದು ಸಮಿತಿ ಬೇಕೆಂದು ತಾವು ಹೇಳುವುದಾದರೆ ಅದನ್ನೂ ಕೂಡ ನಾವು ಪರಿಶೀಲನೆ ಮಾಡೋಣ. ಈಗ ಎಲ್ಲೆಲ್ಲಿ ಸಿಲ್ಕ್ ವೇಸ್ಟ್ ದಾಸ್ತಾನಾಗಿದ್ದು ರೀಲರ್ಸ್‌ಗೆ ತೊಂದರೆಯಾಗಿದೆ ಅದನ್ನೆಲ್ಲಾ ಸರ್ಕಾರ ಖಂಡಿತವಾಗಿಯೂ ಗುರ್ತಿಸಿ ಅದನ್ನು ಖರೀದಿ ಮಾಡುತ್ತದೆ, ಮತ್ತು ಸಿಲ್ಕ್ ರೀಲರ್ಸ್‌ಗೆ ಸಹಾಯ ಮಾಡುವುದಕ್ಕೆ ತಕ್ಷಣ ಸರ್ಕಾರ ಎಲ್ಲ ಪ್ರಯತ್ನಗಳನ್ನೂ ಮಾಡುತ್ತದೆಂದು ಹೇಳಬಯಸುತ್ತೇನೆ.

ಶ್ರೀ ಜಿ. ರಾಜೂಗೌಡ.—ಸ್ವಾಮಿ. ಬೆಲೆ ಏನಾದರೂ ಮಾಡುವಿರಂತೆ, ಇವತ್ತು ನಮ್ಮಲ್ಲಿರತಕ್ಕ ಮಾಲನ್ನು ತುಂಬುವುದಕ್ಕೆ ಜಾಗವಿಲ್ಲ. ಆದ್ದರಿಂದ ಮೊದಲು ಇದನ್ನು ಖರೀದಿ ಮಾಡಿ. ಇನ್ನು ಒಂದೆರಡು ತಿಂಗಳು ಕಳೆದಮೇಲೆ ನಮಗೆ ಹಣವನ್ನು ಕೊಡಿ ಪರವಾಯಿಲ್ಲ.

ಶ್ರೀ ಎಂ. ವೀರಪ್ಪಮೊಯ್ಲಿ.—ತಮ್ಮ ಕಳಕಳೆಯನ್ನು ಸರ್ಕಾರ ಗಮನಿಸುತ್ತದೆ.

MR. DEPUTY SPEAKER.—Now, the next item is Matter under Rule 312. Sri S.R. Bommai and others will raise a matter regarding the hardship caused to the students due to delay in announcing the Government policy about capitation fee and number of seats to be allotted for Medical and engineering colleges in the State.

SRI C. M. ARUMUGHAM.—Sir, before that, I would like to make a submission. The first hour of the days business is earmarked for question hour. Now, you have got another 20 minutes at your disposal for the question hour. I came ten minutes late because the Session sat at 12 Noon itself. It is very difficult for us to come early. As this is a very important subject pertaining to the whole State. I appeal to you to consider this as a special case and provide a chance to raise this matter.

MR. DEPUTY SPEAKER.—You have give a fresh notice and raise it. I request the hon. Member whether there any such precedents.

SRI C. M. ARUMUGHAM.—If there is no precedent, we will create a new precedent.

MR. DEPUTY SPEAKER.—The question hour is over.

SRI C. M. ARUMUGHAM.—Sir, the first hour of the day's business is, 'Question Hour'. Questions are over but the question hour is not over.

MR. DEPUTY SPEAKER.—I will help you, if you could kindly show me any such precedent.

SRI C. M. ARUMUGHAM.—When this type of situation has not at all arisen at any time in the past, how can I show you the precedent? Therefore, I am asking the Chair to permit me to create a new precedent.

MR. DEPUTY SPEAKER.—The question hour is already over. If I allow you to raise your question at this point of time, it will be a bad precedent.

SRI C. M. ARUMUGHAM.—The first hour of the day's agenda is meant for questions and answers. The question hour means one hour. To-day all questions were over within ten minutes or so. Sir, still there are fifteen minutes. I request the Chair kindly to permit me.

MR. DEPUTY SPEAKER.—At the most, I can withold the question. We will take it up tomorrow.

SRI A. LAKSHMISAGAR.—Sir, I wish to make a submission on this issue. It is the practice of this House that the first hour of each sitting of the day shall be set apart for questions and answers. Now, a very ticklish situation has arisen that the question hour was unusually over within the usual allotted time. The hon Member Sri C.M. Arumugham is seeking the permission of the Chair to raise his question, but there is no rule which can permit the Chair to adopt such a procedure. But, where there is no specific rule, the Chair can use its discretion and permit the hon. Member Sri C. M. Arumugham to raise his question. Any procedure to be followed in the House, it shall be done according to the discretion of the Chair. I request the Chair to use its discretion in this case.

MR. DEPUTY SPEAKER.—It cannot be.

SRI C. M. ARUMUGHAM.—I want a ruling on this from the Chair.

MR DEPUTY SPEAKER.—To-day, it is ruled out.

SRI C. M. ARUMUGHAM.—Should I be sure that my question will be taken up tomorrow?

MR. DEPUTY SPEAKER.—Yes. Please raise your matter under Rule 312.

MATTER UNDER RULE 312

(*i*) *re : Rise in Prices of raw silk in the State*

SRI C. M. ARUMUGHAM.—Sir, the matter which I desire to raise under Rule 312 pertains to the silk industry in the State. Karnataka is one of the States which produces bulk of the silk in the country. The other States are, Andhra Pradesh, Tamilnadu, West Bengal and Varanasi. The Hon. Minister for Finance is aware that there is no sales tax on handloom in Andhra Pradesh, Tamilnadu and Varanasi. In Karnataka, there is 2% of sales tax on handlooms and 4% on powerlooms.